ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸುವುದು

2111(2483); ಶ್ರೀ ನಾಗರಾಜ್ ಬಿ.ಎಂ. (ಸಿರಗುಪ್ಪ)

ಅ) ಸಿರುಗುಪ್ಪ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮುದೇನೂರು ಗ್ರಾಮದ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಸದರಿ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿಯೇ ಕೈಗೆತ್ತಿಕೊಳ್ಳಲಾಗಿದೆಯೇ;

ಆ) ಈ ಕಾಮಗಾರಿಗೆ ಮಂಜೂರು ಮಾಡಲಾಗುವ ಅನುದಾನದ ಮೊತ್ತವೆಷ್ಟು;

ಇ) ಸದರಿ ಕಾಮಗಾರಿಯನ್ನು ನಿರ್ಮಿಸಿದರೆ ಈ ಭಾಗದ ರೈತರುಗಳಿಗೆ ತುಂಬಾ ಪ್ರಯೋಜನವಾಗುವುದರಿಂದ 2000 ರಿಂದ 3000 ಎಕರೆ ಜಮೀನಿಗೆ ನೀರೋದಗಿಸಲು ತುಂಬಾ ಸಹಕಾರಿಯಾಗುವುದಿಲ್ಲವೇ;

ಈ) ಹಾಗಿದ್ದಲ್ಲಿ, ರೈತರುಗಳ ಬೇಡಿಕೆಯನ್ನು ಈಡೇರಿಸಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) **ಮತ್ತು ಆ)** 2007–08ನೇ ಸಾಲಿನಲ್ಲಿ ಪ್ರಧಾನ ಕಾಮಗಾರಿಗಳು ಲೆಕ್ಕಶೀರ್ಷಿಕೆ ಅಡಿ ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲ್ಲೂಕಿನ ಮುದೇನೂರ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಗಾಗಿ ₹ 300.00 ಲಕ್ಷ ಅಂದಾಜು ಮೊತ್ತ ಮತ್ತು ₹ 90.00 ಲಕ್ಷ ಅನುದಾನದೊಂದಿಗೆ ಕಾಮಗಾರಿಯನ್ನು ಕೈಗೊಳ್ಳುವ ಅವಕಾಶ ಕಲ್ಪಿಸಲಾಗಿತ್ತು. ಆದರೆ ಈ ಕಾಮಗಾರಿಯ ವಾಸ್ತವಿಕ ಅಂದಾಜು ಮೊತ್ತ ₹ 600.00 ಲಕ್ಷ ಆಗಿದ್ದರಿಂದ ಇದನ್ನು ಕೈಗೊಳ್ಳಲಾಗಿರುವುದಿಲ್ಲ.

ಇ) ಹೌದು.

ಈ) ಮುಂಬರುವ ದಿನಗಳಲ್ಲಿ ಯಾವುದಾದರೂ ಒಂದು ಕಾರ್ಯಕ್ರಮದಡಿ (ಎ.ಐ.ಬಿ.ಪಿ., 4702–ಪ್ರಧಾನ ಕಾಮಗಾರಿಗಳು ಅಥವಾ 4702–ನಬಾರ್ಡ್ ಕಾಮಗಾರಿಗಳು) ಅನುದಾನದ ಲಭ್ಯತೆಯನ್ನು ಆಧರಿಸಿ ಹಾಗೂ ಸಕ್ಷಮ ಪ್ರಾಧಿಕಾರದ ಅನುಮೋದನೆ ದೊರಕಿಸಿಕೊಂಡು ಕೈಗೊಳ್ಳಲು ಪರಿಶೀಲಿಸಲಾಗುವುದು.

ಭೂ ಪರಿವರ್ತನೆಯಾಗದೆ ಬಡಾವಣೆ ನಿರ್ಮಾಣ

2112(2758); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

1) ಬಂಗಾರಪೇಟೆ ತಾಲ್ಲೂಕಿನಲ್ಲಿ ಭೂ ಪರಿವರ್ತನೆ ಮಾಡದೆ 2000 ರಿಂದ 2013 ರವರೆಗೆ ಅನಧಿಕೃತ ಬಡಾವಣೆಗಳನ್ನು ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಬಂದಿದ್ದಲ್ಲಿ, ಯಾವ ಯಾವ ಗ್ರಾಮದ ಸರ್ವೆ ನಂಬರುಗಳಲ್ಲಿ ಅನಧಿಕೃತ ಬಡಾವಣೆಯಾಗಿದೆ (ಗ್ರಾಮದ ಸರ್ವೆ ನಂಬರ್ ಸಹಿತ ವಿವರ ನೀಡುವುದು)

3) ಈ ಅನಧಿಕೃತ ಬಡಾವಣೆಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;

4) ಭೂ ಪರಿವರ್ತನೆಯಾಗದೆ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಾಣ ಮಾಡಿರುವ ವಾಸದ ಮನೆಗಳವರಿಗೆ ಪರಿಹಾರವೇನು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

1) ಹೌದು

2) ಬಂಗಾರಪೇಟೆ ತಾಲ್ಲೂಕು, ಕಸಬಾ ಹೋಬಳಿ, ಹುಣಸನಹಳ್ಳಿ ಗ್ರಾಮದ ಸ.ನಂ. 118/1 ರಲ್ಲಿ 0–06 ಗುಂಟೆ, 118/2 ರಲ್ಲಿ 0–07 ಗುಂಟೆ, 118/4 ರಲ್ಲಿ 0–08 ಗುಂಟೆ, 118/5 ರಲ್ಲಿ 0–02 ಗುಂಟೆ, 118/6 ರಲ್ಲಿ 0–9 ಗುಂಟೆ, 119/14 ರಲ್ಲಿ 0–03 ಗುಂಟೆ ಮತ್ತು 119/2 ರಲ್ಲಿ 0–15 ಗುಂಟೆ ಜಮೀನುಗಳಲ್ಲಿ ಶ್ರೀ ಚಿಕ್ಕ ಮುನೇಗೌಡ